ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಉಲ್ಲೇಖ (1) ರಲ್ಲಿ ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಾಗರ ಗ್ರಾಮದ ಸ.ನಂ. 80/1 ರ ಪೈಕಿ 06 ಎಕರೆ 28 ಗುಂಟೆ, ಸ.ನಂ. 80/3 ರಲ್ಲಿನ 18 ಗುಂಟೆ, ಸ.ನಂ. 83/1 ರಲ್ಲಿನ 03 ಎಕರೆ 32 ಗುಂಟೆ, ಸ.ನಂ. 83/3 ರಲ್ಲಿನ 03 ಎಕರೆ 32 ಗುಂಟೆ ಮತ್ತು ಸ.ನಂ. 89/1 ರಲ್ಲಿನ 03 ಎಕರೆ 05 ಗುಂಟೆ ಒಟ್ಟು 17 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನುಗಳ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನುಗಳು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ವಸತಿ, ಭಾಗಶಃ ಉದ್ಯಾನವನ ಮತ್ತು ಬಯಲು ಜಾಗ ವಲಯ ಹಾಗೂ ಉದ್ದೇಶಿತ 12 ಮೀ. ಅಗಲದ ರಸ್ತೆಗಾಗಿ ಕಾಯ್ದಿರಿಸಲಾಗಿದ್ದು, ಅದರಂತೆ ಪ್ರಸ್ತಾಪಿತ ಜಮೀನುಗಳನ್ನು ವಸತಿ ಹಾಗೂ ಉದ್ಯಾನವನ ಮತ್ತು ಬಯಲು ಜಾಗದ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಮಾನ್ಯ ಜಿಲ್ಲಾಧಿಕಾರಿಗಳು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತಾರೆ.

| ಕ್ರ. ಸಂ. | ಸ.ನಂ. | ವಿಸ್ತೀರ್ಣ ಎ–ಗುಂ | 'ಬಿ' ಖರಾಬು ಗುಂ | ಉದ್ದೇಶ | ಭೂ ಪರಿವರ್ತನಾ ಆದೇಶದ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|
| 1 | 80/1 ರ ಪೈಕಿ | 06–28 | 08 | ವಸತಿ | 470538, ದಿನಾಂಕ: 17.07.2023 |
| 2 | 80/3 | 00–18 | – | ವಸತಿ | 470535, ದಿನಾಂಕ: 17.07.2023 |
| 3 | 83/1 | 03–32 | 02 3/4 | ವಸತಿ | 5 6753, ದಿನಾಂಕ: 30.08.2023 |
| 4 | 83/3 | 03–32 | 02 3/4 | ವಸತಿ | 4 4277, ದಿನಾಂಕ: 27.01.2023 |
| 5 | 89/1 | 00–11 1/2 | – | ಉದ್ಯಾನವನ ಮತ್ತು ಬಯಲು ಜಾಗ | 757687, ದಿನಾಂಕ: 07.04.2025 |
| | | 02–33 1/2 | – | ವಸತಿ | 757669, ದಿನಾಂಕ: 07.04.2025 |
| ಒಟ್ಟು | | **17–35** | **13 1/2** | | |

ಉಲ್ಲೇಖ (2) ರ ದಿನಾಂಕ: 30.06.2025 ರಂದು ನಡೆದ ಪ್ರಾಧಿಕಾರದ 107 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 36 ರಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಪ್ರಸ್ತಾಪಿತ ಜಮೀನುಗಳಿಗೆ ನಿಯಮಾನುಸಾರ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನವಾಗಿರುತ್ತದೆ. ಸದರಿ ಸಭೆಯ ತೀರ್ಮಾನದನ್ವಯ ಉಲ್ಲೇಖ (3) ರಲ್ಲಿ ಅರ್ಜಿದಾರರಿಗೆ ನಿಗದಿತ ಶುಲ್ಕವನ್ನು ಪಾವತಿಸುವಂತೆ ತಿಳಿಸಲಾಗಿದ್ದು, ಅದರಂತೆ, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕ **ರೂ. 18,08,414/–, 14,46,731/–, 79,574/–, 28,93,462/–, 2,89,346/–, 1,44,673/– ಮತ್ತು 2,89,346/–** ಗಳನ್ನು ಈ ಕಛೇರಿಗೆ ಪಾವತಿಸಿರುತ್ತಾರೆ.

